ಅಧ್ಯಕ್ಷರು : ಇದು ಸ್ವಲ್ಪ ದೊಡ್ಡದಾಗಿರುವುದರಿಂದ ಈಗ ನಿಯಮ 69ರ ಮೇಲೆ ಚರ್ಚೆಗೆ ತೆಗೆದುಕೊಂಡು ನಾಳೆ ಬೇರೆಯವರದೂ ಸೇರಿಸಿ ಒಟ್ಟಿಗೆ ತೆಗೆದುಕೊಳ್ಳೋಣ.

ಶ್ರೀಮಾನ್ ಆಶೋಕ್‌ರವರು, ಇದೂ ಅಷ್ಟೇ.

3. ವಿಷಯ :– ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದಲ್ಲಿ ಉದ್ಭವಿಸಿರುವ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸುವ ಬಗ್ಗೆ.

ಶ್ರೀ ಆರ್. ಅಖಂಡ ಶ್ರೀನಿವಾಸಮೂರ್ತಿ (ಪುಲಿಕೇಶಿ ನಗರ) :– ಮಾನ್ಯ ಅಧ್ಯಕ್ಷರೆ, ನನ್ನ ವಿಧಾನಸಭಾ ಕ್ಷೇತ್ರವಾದ ಪುಲಿಕೇಶಿ ನಗರದ ವ್ಯಾಪ್ತಿಯಲ್ಲಿ 7 ವಾರ್ಡ್‌ಗಳಿವೆ. ಅದರಲ್ಲಿ 6 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವುದರಿಂದ ಒಂದು ಬಿಂದಿಗೆ ನೀರಿಗೆ 10 ರೂಪಾಯಿ ಕೊಡಬೇಕು. ವಿಧಾನಸೌಧದಿಂದ ಕೇವಲ 3 ಕಿ.ಮೀ. ನಲ್ಲಿ ನಮ್ಮ ವಿಧಾನಸಭಾ ಕ್ಷೇತ್ರವಿರುವುದು. ಇವತ್ತಿಗೂ ಕೂಡ 10 ರೂಪಾಯಿಗೆ ಒಂದು ಬಿಂದಿಗೆ ನೀರನ್ನು ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಇದೆ. ಅಲ್ಲಿ ವಾಸಿಸುತ್ತಿರುವ ಜನರಲ್ಲಿ ಪರಿಶಿಷ್ಟ ಜಾತಿ, ಪರಿಶಿಟ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರೇ ಹೆಚ್ಚಿದ್ದಾರೆ,. ಹೆಚ್ಚು ಮೂಲಭೂತ ಸೌಕರ್ಯಗಳಿಲ್ಲದ ಸ್ಥಳವಾಗಿದೆ. ನನ್ನ ಕ್ಷೇತ್ರದಲ್ಲಿ ಆಗಿರುವ ನೀರಿನ ಸಮಸ್ಯೆ ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕಾಗಿ ಒಂದು ಜಿ.ಎಲ್.ಆರ್. ಪಂಪ್‌ಹೌಸ್‌ನ್ನು ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಇದಕ್ಕೆ ಉತ್ತರ ಹೇಳಲು ಮಂತ್ರಿಗಳ್ಯಾರಾದರೂ ಇದ್ದಾರೆಯೇ?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ವಿಚಾರವಿದೆ. ಇದು ನನಗೇ ಬರುತ್ತದೆ. ನಾನು ಮಧ್ಯಾಹ್ನದ ಮೇಲೆ ಇದಕ್ಕೆ ಉತ್ತರವ ಕೊಡುತ್ತೇನೆ.

ಅಧ್ಯಕ್ಷರು : OK.

4. ವಿಷಯ :– ಕಂದಾಯರಹಿತ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿಮಾಡುವ ಬಗ್ಗೆ.

ಶ್ರೀ ಕೆ. ಶಿವಮೂರ್ತಿ (ಮಾಯಕೊಂಡ) :- ಮಾನ್ಯ ಅಧ್ಯಕ್ಷರೆ, ನಾನು ಈ ದಿವಸ ಕರ್ನಾಟಕದಲ್ಲಿರತಕ್ಕಂಥ 27 ಸಾವಿರ ಕಂದಾಯರಹಿತ ಗ್ರಾಮಗಳ ಬಗ್ಗೆ, ಅಲ್ಲಿನ ಪರಿಸ್ಥಿತಿ ಬಗ್ಗೆ ಹೇಳುವುದೇನೆಂದರೆ Revenue Act ಅನ್ನು ಏನು ಹಿಂದೆ ಬ್ರಿಟಿಷ್‌ನವರು ಮಾಡಿಹೋಗಿದರೋ ಅದನ್ನೇ ಇವತ್ತಿಗೂ ಮುಂದುವರೆಸಿಕೊಂಡು ಬರುತ್ತಿದ್ದೇವೆ. ಇಲ್ಲಿರತಕ್ಕಂಥ hamlet villagesಗಳು ಏನಿವೆಯೋ ಇದರಲ್ಲಿ ಹಾಡಿಗಳು, ಹಟ್ಟಿಗಳು. ತಾಂಡಾಗಳು, ಬಸದಿಗಳು ಇವೆಲ್ಲಾ 27 ಸಾವಿರ social settlements ಇವೆ, ಇವುಗಳಿಗೆ ಗ್ರಾಮಸಭೆಯ status ಇಲ್ಲ. ಪಂಚಾಯತ್ ರಾಜ್ ಆ್ಯಕ್ಟ್ ಬಂದು ಇವೆಲ್ಲಾ non-grama ಆಗುತ್ತವೆ. ಕಂದಾಯ ಗ್ರಾಮ ಬೇರೆ, ಕಂದಾಯರಹಿತ ಗ್ರಾಮ ಬೇರೆ.

ಅಧ್ಯಕ್ಷರು : ಮುಜರಾಯಿ ಗ್ರಾಮಗಳು ಎಂದು ಹೇಳಿ.

ಶ್ರೀ ಕೆ. ಶಿವಮೂರ್ತಿ :- ಹೌದು ಮುಜರಾಯಿ ಗ್ರಾಮಗಳು ಇಲ್ಲಿ basic amenitiesಆದರೆ ಅದನ್ನು ಯೂನಿಟ್ ಎಂದು ಪ್ಲಾನಿಂಗ್ ಕಮಿಷನ್‌ನವರು ಪರಿಗಣನೆ ಮಾಡಲಿಲ್ಲ. ಅದಕ್ಕೋಸ್ಕರ Revenue Act ನಲ್ಲಿ there is noclassification regarding non-revenue village and definite definition, ಇದು ಒಂದು ವಿಚಾರ. ಈ ರೀತಿ ಯಾವಾಗ ಈ ಬಗ್ಗೆ definition ಇಲ್ಲವೋ, classification ಇಲ್ಲವೋ the unit will not be considered, ಎಂದು ಪ್ಲಾನಿಂಗ್ ಕಮಿಷನ್‌ನವರು consider ಮಾಡುವುದಿಲ್ಲ. ನೇರವಾಗಿ ಹಣ ಕೇಂದ್ರ ಯೋಜನಾ ಆಯೋಗದಿಂದ, ರಾಜ್ಯ ಆಯೋಗದಿಂದ ಪ್ಲಾನಿಂಗ್‌ನಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಹೀಗಾಗಿ ಒಂದು,Revenue Actಅನ್ನು amendment ಮಾಡಬೇಕಾಗುತ್ತದೆ. ಅದನ್ನು ಮಾಡುವುದರ ಮೂಲಕ Panchayat Raj Actಅನ್ನು ಗ್ರಾಮಸಭೆ ನಡೆಸಬೇಕಾದರೆ ಗ್ರಾಮವೆಂಬ ಸ್ಟೇಟಸ್ ಇರಬೇಕಾಗುತ್ತದೆ. ಆದರೆ ಇವೆಲ್ಲಾnon-grama ಗಳು. ಸುಮಾರು ಈ ರೀತಿ ತಾಂಡಾಗಳು, ಹಟ್ಟಿಗಳ ಮತ್ತು ಅರಣ್ಯ ಪ್ರದೇಶದಲ್ಲಿರತಕ್ಕಂಥ ಜಮೀನುಗಳು, ಇವೆಲ್ಲಾ ಬೇರೆ ಬೇರೆ ಹೆಸರಿನಲ್ಲಿ– ರತಕ್ಕಂಥದ್ದು.

ಅಧ್ಯಕ್ಷರು :– ಮಾನ್ಯ ಶಿವಮೂರ್ತಿಯವರೆ, ಹಟ್ಟಿ, ತಾಂಡಾಗಳು ಮುಜರಾಯಿ ಗ್ರಾಮಗಳಾಗಿವೆ. ಇವುಗಳನ್ನು ಅಸಲಿ ಗ್ರಾಮಗಳನ್ನಾಗಿ ಮಾಡಬೇಕೆಂದು ನಿಮ್ಮ ವಾದವಲ್ಲವೆ?

ಶ್ರೀ ಕೆ. ಶಿವಮೂರ್ತಿ :– ಇದರ ಜೊತೆಗೆ ಗೊಲ್ಲರಹಟ್ಟಿ, ಹಾಡಿಗಳು

ಅಧ್ಯಕ್ಷರು :– ಗೊಲ್ಲರಹಟ್ಟಿ, ದೇವರಹಟ್ಟಿ ಹೀಗೆ ಎಲ್ಲವೂ ಹಟ್ಟಿಗಳೇ ಆಗಿದೆ ಶಿವಮೂರ್ತಿಯವರೆ, ಮುಜರಾಯಿ ಗ್ರಾಮಗಳನ್ನು ಅಸಲಿ ಗ್ರಾಮಗಳನ್ನಾಗಿ ಮಾಡಬೇಕೆಉ ಎಂದು ಹೇಳಿ.

ಶ್ರೀ ಕೆ. ಶಿವಮೂರ್ತಿ :– ಮುಜರಾಯಿ ಗ್ರಾಮಗಳನ್ನಾಗಿ ಮಾಡಬೇಕಾದರೆ, Reveue Act ಅನ್ನು namendment ಮಾಡಬೇಕು. ಇದನ್ನು ಮಾಡಿ classification ಮಾಡಬೇಕಾಗುತ್ತದೆ. ಈಗ ಆ ರೀತಿ ಮಾಡದಿರುವುದರಿಂದ ಅಲ್ಲಿ ವಾಸಿಸುವ ಜನರನ್ನು secondary citizen ಎನ್ನುವ ರೀತಿ ನೋಡುತ್ತಿದ್ದಾರೆ. ಈ ಹಳ್ಳಿಗಳೆಲ್ಲಾ secondary villages ಆಗಿವೆ ಹೀಗಾಗಿ ಅಲ್ಲಿ ವಾಸಿಸತಕ್ಕಂಥ ಜನಗಳೂ secondary citizen of the country ಸಹ ಆಗಿದ್ದಾರೆ. ನೀವು ದಯವಿಟ್ಟು ಇಲ್ಲಿರತಕ್ಕಂಥ ಎಸ್‌ಸಿ ಗಳು, ಬ್ಯಾಕ್‌ವರ್ಡ್ ಕ್ಲಾಸ್‌ನವರು ಅಥವಾ ಬೇರೆ ಬೇರೆಯವರೇನಿದ್ದಾರೆ ಅವರಿಗೆಲ್ಲಾ status ಬರಬೇಕೆಂದರೆ, ನೀವು ದಯವಿಟ್ಟು ಬ್ರಿಟಿಷ್‌ನವರು ಮಾಡಿರತಕ್ಕಂಥ Reveue Act ಅನ್ನು ಬದಲಾವಣೆ ಮಾಡಬೇಕು, classify ಮಾಡಬೇಕು, ಸರ್ವೇ ಮಾಡಬೇಕು, ಅದಕ್ಕೆ ನಂಬರ್ ಕೊಡಬೇಕು, territory fix ಮಾಡಬೇಕು ಮತ್ತು ಅದಕ್ಕೋಸ್ಕರ legal status ಕೊಡಬೇಕು.

(ಗೊಂದಲ)

ಅಧ್ಯಕ್ಷರು :– ಸವರು ಹೇಳಿದ್ದನ್ನೇ ಎಲ್ಲರೂ ಒಟ್ಟಿಗೆ ಹೀಗೆ ಹೇಳಿದರೆ ಹೇಗೆ ಹೇಳಿ. ಮಾನ್ಯ ಕಂದಾಯ ಸಚಿವರೆ, ನೀವು ಉತ್ತರ ಹೇಳಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಮಾನ್ಯ ಸದಸ್ಯರು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬಹಳ ಹಿಂದಿನಿಂದಲೂ ಕೂಡ ಈAct ಇದೆ. ಅದರಲ್ಲಿಯೂ ಬಹಳ ಮುಖ್ಯವಾಗಿ ತಾಂಡಾಗಳನ್ನು ರೆವಿನ್ಯೂ

ಗ್ರಾಮಗಳನ್ನಾಗಿ ಮಾಡಬೇಕೆಂದು ಇದೆ. ಇದುವರೆಗೆ ರಾಜ್ಯದಲ್ಲಿರುವ ಹಟ್ಟಿಗಳ ಬಗ್ಗೆ ಕೂಡ ಹೇಳಿದ್ದಾರೆ ತಾಂಡಾಗಳು, ಹಟ್ಟಿಗಳು, ಇದಲ್ಲದೇ ಬೇರೆ ಬೇರೆ ಗ್ರಾಮಗಳೂ ಕೂಡ ಇದೆ. Non-revenue villageಗಳಲ್ಲಿ ಯಾವುದನ್ನು revenue village ಗಳನ್ನಾಗಿ ಮಾಡಬೇಕೆಂಬುದಕ್ಕೆ criteria ಇಟ್ಟುಕೊಳ್ಳಲಾಗಿದೆಯಲ್ಲಾ? ಕನಿಷ್ಠ 100 ಮನೆಗಳು ಇರಬೇಕು ಮತ್ತು ಐದು ನೂರಷ್ಟು ಜನಸಂಖ್ಯೆಯಿದ್ದರೆ ಅಂಥವುಗಳನ್ನು revenue village ಆಗಿ ಮಾಡಬೇಕೆಂದು ಇದೆ. ಆದರೆ ಬಹಳ ಮುಖ್ಯವಾಗಿ laudable demand ಎಂದರೆ, ಬಹಳ ಒತ್ತಾಯ ಇರತಕ್ಕಂಥದ್ದು ಈ ತಾಂಡಾಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಮಾಡಬೇಕೆಂಬುದು ಈಗಾಗಲೇ ಕೆಲಸವನ್ನು ಮಾಡಲಾಗಿದೆ. ಒಟ್ಟಾರೆ ವಿಭಾಗವಾರು ಸುಮಾರು 893 ತಾಂಡಗಳಿವೆ. ಅದರಲ್ಲಿ 241 ತಾಂಡಾಗಳನ್ನು ಇದುವರೆಗೂ ಕೂಡ ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ ಮಾಡಬೇಕಾಗಿದೆ. ಇನ್ನು 652 ಬಾಕಿ ಇದೆ. ಅವುಗಳನ್ನೂ ಕೂಡ ಮಾಡಬೇಕಾಗಿದೆ. ಇವತ್ತು ಇದರ ಬಗ್ಗೆ ಬಹಳ ಧೀರ್ಘವಾಗಿ ಪ್ರಸ್ತಾಪ ಮಾಡಿ, ಅದರ ಹಿನ್ನಲೆ ಏನು, ಏಕೆ ರೆವಿನ್ಯೂ ವಿಲೇಜ್‌ಗಳಾಗಿ ಆಗಬೇಕು ಎಂಬ ಬಗ್ಗೆ ಹೇಳಿದ್ದಾರೆ. ಅದಕ್ಕೆ Act ಕೂಡ ಅಮೆಂಡ್‌ಮೆಂಟ್ ಮಾಡಬೇಕು ಎನ್ನತಕ್ಕಂಥದ್ದನ್ನು ಹೇಳಿದ್ದಾರೆ, ಬಹುಶಃ ಇದನ್ನು ನಾವು ಪರಶೀಲನೆ ಮಾಡಿ ಖಂಡಿತವಾಗಿಯೂ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ಏಕೆಂದರೆ ನಾವೂ ಕೂಡ ಆ ಕಡೆ ಕುಳಿತುಕೊಂಡಿದ್ದಾಗ ತಾಂಡಾಗಳನ್ನು ರೆವಿನ್ಯೂ ವಿಲೇಜ್‌ಗಳನ್ನಾಗಿ ಮಾಡಬೇಕು, ಕೆಲವು ಗ್ರಾಮಗಳಲ್ಲಿ 500 ಜನಸಂಖ್ಯೆಗಿಂತ ಹೆಚ್ಚು ಜನಸಂಖ್ಯೆ ಇರತಕ್ಕಂಥ ತಾಂಡಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಮಾಡಬೇಕು ಎಂದು ಮಾತನಾಡಿದ್ದೇವೆ. ಖಂಡಿತವಾಗಿಯೂ ಇದರ ಬಗ್ಗೆ ಪರಿಶೀಲನೆ ಮಾಡಿ ಈ ಬಗ್ಗೆ ಇರತಕ್ಕಂಥ Act ಗೆ ಆದಷ್ಟು ತಿದ್ದುಪಡಿ ತಂದು ಕಂದಾಯ ಇಲಾಖಾಧಿಕಾರಿಗಳ ಜೊತೆ ಮಾತನಾಡಿ ರೆವಿನ್ಯೂ ವಿಲೇಜ್‌ಗಳನ್ನಾಗಿ ಮಾಡಿಕೊಡುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಮಾನ್ಯ ಮಂತ್ರಿಗಳೇ, ಒಂದ್ನಿಮಿಷ. ಸರ್, you have righty analysed. ಅವರಿಗೆ ಗೈಡ್ ಮಾಡಿದಿರಿ. Hamlet villages ಎನ್ನುವ concept ಪ್ರಾರಂಭವಾಗಿದ್ದೇ

ಅವರನ್ನು inferior citizens ಆಗಿ ನೋಡಿದ್ದಕ್ಕೆ. ಅವರಿಗೆ ಗ್ರಾಮದ statusಇಲ್ಲ. ಗ್ರಾಮಸ್ಥರ ಸ್ಟೇಟಸ್ ಇಲ್ಲ. ಯಾರು ಇಲ್ಲಿ ದೊಡ್ಡ ಮನುಷ್ಯರು ಇರುತ್ತಿದ್ದರೋfeudal lords ಇವರ services caterಮಾಡುವುದಕ್ಕಷ್ಟೇ they were made to live.ಇದು ಬ್ರಿಟಿಷ್‌ರ ಕಾಲದಿಂದಲೂ ಬಂದಿದೆ. You are a man of lot of ideological convictions. It does not require any financial expenditure or other things to the government. How long should we treat these villages as inferiors? How long should we treat them as secondary citizens? ಡಿಕ್ಲೇರ್ ಮಾಡಿ ನೀವು, forthwith you accord them the stats of revenue villages, There is nothing that you loose. ಗೊಲ್ಲರಹಟ್ಟಿ, ದೇವರಹಟ್ಟಿ, ಆ ಹಟ್ಟಿ, ಈ ಹಟ್ಟಿ ಎನ್ನುವ ಪ್ರಶ್ನೆಯಲ್ಲ any hamlet village should forthwith be considered as revenue village. They are repectable citizens of this country. What happens to the stste of constitution if you do not invoke this?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ :– ನೋಡಿ ಇಲ್ಲಿ ತಾಂಡ ಅಥವಾ ಹಟ್ಟಿ ಎನ್ನುವ ಪ್ರಶ್ನೆಯಿಲ್ಲ. ಯಾವುದು ರೆವಿನ್ಯೂ ವಿಲೇಜ್ ಆಗುವುದಕ್ಕೆ ನಾನು ಹೇಳಿದಂತಹ criteria ಇರತಕ್ಕಂಥದ್ದನ್ನು ನೋಡಿ ಖಂಡಿತ ಅದೆಲ್ಲವನ್ನೂ ಕೂಡ ಪರಿಗಣಿಸುತ್ತೇವೆ.

ಶ್ರೀ ಕೆ. ಶಿವಮೂರ್ತಿ :– ಬ್ರಿಟಿಷ್‌ನವರು ಇದಕ್ಕೆ ಅಮೆಂಡ್ ಮಾಡಲಿಲ್ಲ. 1947 ರಲ್ಲಿ Revenue Act ಬಂತಲ್ಲಾ, ಅದನ್ನೇcopy ಮಾಡಿಕೊಂಡು ಹೋಗುತ್ತಿದ್ದಾರೆ. Four Supreme Court Judges have attended about this. All legal Luminaries have attended it. This is regional im balance.

(ಗೊಂದಲ)

ಅಧ್ಯಕ್ಷರು :– Revenue Act ಯಾವಾಗ ಬಂತು ಎಂದು ಇರಿಗೆಲ್ಲಾ ಗೋತ್ತಿಲ್ಲವೆ? ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ :– ಇಲ್ಲಿ ಈ ವಿಷಯದ ಚರ್ಚೆ ಬೇರೆ ರೂಪದಲ್ಲಿ ಬಂದಿಲ್ಲ. ಶೂನ್ಯ ವೇಳೆಯಲ್ಲಿ ನೀವೇನು ಪ್ರಸ್ತಾಪ ಮಾಡಿದ್ದೀರೋ ಅಷ್ಟಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಶಿವಮೂರ್ತಿ :– ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು :– ನೋಡಿ, ಈಗ ಮಂತ್ರಿಗಳುin principle ಒಪ್ಪಿಕೊಂಡಿದ್ದಾರೆ. ನೀವು ಹೇಳಿರುವ ವಿಚಾರವನ್ನು ಮಾಡಿಕೊಡುತ್ತಾರೆ.

ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್ :– ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳು ...

ಅಧ್ಯಕ್ಷರು :– ನೀವು ಸಚಿವರಾಗಿದೀರಿ, ನೀವು ಮಾತನಾಡುವುದು ಬೇಡ, ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ.

ಡಾ: ಉಮೇಶ್ ಜಿ.ಜಾಧವ್ :– ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು :– ನೀವು ನೋಟಿಸ್ ಕೊಟ್ಟಿಲ್ಲ. ನೋಟಿಸ್ ಕೊಡಿ ಬೇರೆಯದಕ್ಕೆ ಅವಕಾಶ ಕೊಡೋಣ.

ಸಿ.ಟಿ ರವಿಯವರೆ, ತಾವು ಪ್ರಸ್ತಾಪ ಮಾಡಿ.

5. **ವಿಷಯ :– ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಮಿಲ್ಕ್ ಸೊಸೈಟಿಗಳವರು ತೆಗೆದು ಕೊಳ್ಳುತ್ತಿರುವ ಹಾಲಿಗೆ ಸೂಕ್ತ ಬೆಲೆಯನ್ನು ನೀಡದೆ ನಿರಾಕರಿಸುತ್ತಿರುವ ಬಗ್ಗೆ.**

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) :– ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸಹಕಾರಿ ಮಿಲ್ಕ್ ಯೂನಿಯನ್‌ನಲ್ಲಿ. ಸೊಸೈಟಿಗಳಲ್ಲಿ ಮಿಲ್ಕ್ low SNF ಇದೆಯೆಂದು ಹೇಳಿ ಅವರ ಹಾಲಿಗೆ ಬೆಲೆಯನ್ನೇ ನಿರಾಕರಿಸುತ್ತಿದ್ದಾರೆ. ಈಗ low SNF ಇದೆಯೆಂದು ಹೇಳಿ ಸ್ಪಾಟ್‌ನಲ್ಲೇ ಅವರ ಹಾಲನ್ನು ರಿಜೆಕ್ಟ್ ಮಾಡುತ್ತಿಲ್ಲ. ಸ್ಪಾಟ್‌ನಲ್ಲಿ ಹಾಲನ್ನು ಹಾಕಿಸಿಕೊಳ್ಳುತ್ತಾರೆ. ಹಾಲನ್ನು ಹಾಕಿಸಿಕೊಳ್ಳಬೇಕಾದರೆ ಡಿಗ್ರಿ ಚೆಕ್ ಮಾಡಿರುತ್ತಾರೆ, ಫ್ಯಾಟ್ ಚೆಕ್ ಮಾಡಿರುತ್ತಾರೆ, ಹೀಗೆ ಇವೆಲ್ಲವನ್ನೂ ಚೆಕ್ ಮಾಡಿರುತ್ತಾರೆ.

ಆಮೇಲೆ ಡೈರಿಗೆ ಹೋದನಂತರ ಲೋ ಎಸ್.ಎನ್.ಎಫ್. ನಿಂದ reject ಮಾಡಿದ್ದೇವೆಂದು ಹೇಳಿ ಕೇವಲ 4 ರೂಪಾಯಿ ರೇಟ್ ಹಾಕಿ, ಅದನ್ನು